

ಕುಫ್ರಿ

# ದೇವಭೂಮಿ ಹಿಮಾಚಲದಲ್ಲಿ..



ಸಂಕಟ ಮೋಚನ್ ಹನುಮಂತನ ದೇವಸ್ಥಾನ

**ಈ ಸಟ್ಲಜ್ ನದಿಯ ಕೊನೆ ಬಂದು ತಲುಪಿದರೆ ಕೊರೆಯುವ ತಣ್ಣನೆಯ ನೀರು! ಅಲ್ಲಿಂದ ಕಾಲು ತೆಗೆದು ಈ ಕಡೆ ಇಟ್ಟರೆ ಕುದಿಯುವ ಬಿಸಿನೀರಿನ ಬುಗ್ಗೆ!**

■ **ಡಾ. ಕೆ.ಎಸ್. ಪವಿತ್ರ**

ಬಿರು ಬೇಸಿಗೆಯನ್ನು ಸಹನೀಯವಾಗಿಸಲು ಬ್ರಿಟಿಷರು ಕಂಡುಹಿಡಿದ ಶೀತಲ ಗಿರಿಧಾಮ ಹಿಮಾಚಲದ ಶಿಮ್ಲಾ. 'ಶ್ಯಾಮಲಾ' ಎಂಬ ಸಣ್ಣ ಹಳ್ಳಿಯಾಗಿದ್ದ ಶಿಮ್ಲಾ, ಕ್ರಮೇಣ ಬ್ರಿಟಿಷರ ಬೇಸಿಗೆಯ ರಾಜಧಾನಿಯಾಯಿತು. ಇಂದಿಗೂ ಹಿಮಾಚಲದ ರಾಜಧಾನಿಯಾಗಿರುವ ಶಿಮ್ಲಾ ಆಧುನಿಕ ಸೌಲಭ್ಯಗಳು, ಪ್ರವಾಸೀ ಪ್ರಾಕೃತಿಕ ತಾಣಗಳಿಂದ ಹಿಮಾಚಲದ ಬೇರೆಲ್ಲಾ ಗಿರಿಧಾಮಗಳಿಗಿಂತ ಹೆಚ್ಚು ಪ್ರಸಿದ್ಧ. ಹಿಮದ– ಚಳಿಗಾಲದ ಸವಿಯನ್ನು ಮೊದಲ ಬಾರಿ ಸವಿಯುವವರಿಗಂತೂ ಶಿಮ್ಲಾ ಸೂಕ್ತ ತಾಣ. ದೇವದಾರು ಮರಗಳು, ಕಡಿದಾದ ಕಣಿವೆಗಳು, ಉದ್ದನೆಯ ಮೂಗಿನ ಬಿಳೀ ಚರ್ಮದ, ಎತ್ತರದ ಸುಂದರ– ಸುಂದರಿಯರು..!

ಶಿಮ್ಲಾಕ್ಕೆ ದಿಲ್ಲಿಯಿಂದ ಟ್ರೇನ್, ಬಸ್ಸು, ಕಾರು, ವಿಮಾನ ಎಲ್ಲವೂ ಲಭ್ಯ. ಆದರೆ ಪ್ರಾಕೃತಿಕ ಸೌಂದರ್ಯದ ನಿಜವಾದ ಸವಿ ಸಿಗುವುದು, ವಾಂತಿಯಿಲ್ಲದೆ ಶಿಮ್ಲಾ ತಲುಪಲು ಸಾಧ್ಯವಾಗುವುದು 'ಟಾಯ್ ಟ್ರೇನ್'ನಲ್ಲೇ. ಪ್ರಾಕ್ಟಿಕಲ್ಲಾಗಿ ಯೋಚಿಸುವ ತುಂಬಾ ಜನರಿಗೆ ಇದು 'ಟೈಮ್ ವೇಸ್ಟ್' ಎನಿಸಿದರೂ ಶಿಮ್ಲಾ ಪ್ರವಾಸದ ಒಂದು ಮುಖ್ಯ ಭಾಗ ಈ 'ಟಾಯ್‌ಟ್ರೇನ್'.

ದಿಲ್ಲಿಯಿಂದ ನಾಲ್ಕೂವರೆ ಗಂಟೆಗಳ ಪ್ರಯಾಣ ಮಾಡಿ ಕಾಲ್ಕಾಗೆ ಬಂದರೆ ಈ ನೂರು ವರುಷಗಳಷ್ಟು ಹಳೆಯದಾದ ರೈಲು ಪ್ರಯಾಣ ಲಭ್ಯ. 1903ರಲ್ಲಿ ಲಾರ್ಡ್ ಕರ್ಜನ್‌ನಿಂದ ಆರಂಭಿಸಲ್ಪಟ್ಟ ಈ ರೈಲು ಮಾರ್ಗ ಪ್ರಪಂಚದಲ್ಲಿಯೇ ಅತ್ಯಂತ ಕಡಿದಾದದ್ದು ಎಂಬ ದಾಖಲೆ ಹೊಂದಿದೆ. 103 ಸುರಂಗಗಳು, 800ಕ್ಕೂ ಹೆಚ್ಚು ಸೇತುವೆಗಳಿಂದ ಹಾದು ಕಾಲ್ಕಾದ 655 ಮೀಟರ್ ಎತ್ತರದಿಂದ ಶಿಮ್ಲಾದ

(31ನೇ ಪುಟ ನೋಡಿ)